ಓಎಸ್. 09/2018

ಡಿ.ಡಬ್ಲುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 06-01-2023.

**ಪಾಟೀಸವಾಲುಃ 14 ಮತ್ತು 16 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಎಂ ಎನ್ ವಕೀಲರಿಂದ,**

ದಾವಾಸ್ತಿಗಳು ನನ್ನ ತಂದೆ ಸೋಮಯ್ಯ ಮತ್ತು ಚಿಕ್ಕಪ್ಪ ದುರ್ಗಪ್ಪ ರಿಗೆ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಯವರಿಗೆ ಸರ್ವೆ ನಂ.680 ರಲ್ಲಿ ಇಬ್ಬರಿಗೂ ಸಮಾನ ಹಕ್ಕು ಇದೆ ಎಂದರೆ ಸರಿ. ಇಬ್ಬರೂ ತಮ್ಮ ಜೀವಿತಾವಧಿಯಲ್ಲಿ ದಾವಾಸ್ತಿಯಲ್ಲಿ ಮೌಖಿಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ದುರ್ಗಪ್ಪ ನ ಮಕ್ಕಳಾದ ಪ್ರತಿವಾದಿ 5 ರಿಂದ 10 ರವರೆಗೆ ಬಂದಂತಹ 36 ಗುಂಟೆ ಆಸ್ತಿಯನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿಯವರಿಗೆ ಮಾರಾಟ ಮಾಡಲು ನನ್ನ ತಂದೆ ಮತ್ತು ನಾನು ಸಹ ಒಪ್ಪಿಗೆ ನೀಡಿರುತ್ತೇನೆ. ಸದರಿಯವರು ಮಾಡಿದ ಕ್ರಯಪತ್ರಕ್ಕೆ ನನ್ನ ತಂದೆಯವರು ಸಹಿ ಹಾಕಿದ್ದಾರೆ ಎಂದರೆ ಸರಿ. ಕ್ರಯ ಪತ್ರದಂತೆ ದಾವಾಸ್ತಿಯನ್ನು 12 ಪ್ರತಿವಾದಿಗೆ ಕಬ್ಜಾ ವಹಿವಾಟು ಕೊಡಲಾಗಿದೆ ಎಂದರೆ ಸರಿ. ನಂತರ 12 ನೇ ಪ್ರತಿವಾದಿ 14 ನೇ ಪ್ರತಿವಾದಿಗೆ 8 ಗುಂಟೆ 16 ಪ್ರತಿವಾದಿಗೆ 4 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಅದರಂತೆ ಅವರು ಕಬ್ಜಾ ವಹಿವಾಟಿನಲ್ಲಿದ್ದಾರೆ ಎಂದರೆ ಸರಿ. ನನ್ನ ತಂದೆ ಸರ್ವೆ ನಂ.680 ರಲ್ಲಿ 36 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ದಾನ ಪತ್ರದ ಮುಖಾಂತರ ನೀಡಿದ್ದಾರೆ ಎಂದರೆ ಸರಿ. 12 ನೇ ಪ್ರತಿವಾದಿ 14 ಮತ್ತು 16 ನೇಯವರಿಗೆ ಮಾರಾಟ ಮಾಡಿದ ವಿಚಾರವಾಗಿ ಮತ್ತು ನನ್ನ ತಂದೆ ದಾನ ಪತ್ರ ಮಾಡಿದ ಬಗ್ಗೆ ನಮ್ಮದು ಯಾವುದೇ ತಕರಾರು ಇರುವುದಿಲ್ಲ.

ವಾದಿ ಮತ್ತು ಇನ್ನುಳಿದ ಪ್ರತಿವಾದಿಗಳ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ